## ಬಿಎಂಡಬ್ಲ್ಯು ಅನುಭವ



ಹೊಸದಾಗಿ ಮದುವೆಯಾಗಿ ದೆಹಲಿಯಲ್ಲಿ ಸಂಸಾರ ಹೂಡಿದ್ದ ನನ್ನ ಗೆಳತಿಯ ಮಗಳು ಒಂದು ವರ್ಷದ ನಂತರ ಪತಿಯೊಡನೆ ತವರಿಗೆ ಬಂದಿದ್ದಳು. ಒಂದು ಸಂಜೆ ಅವರನ್ನು ಮಾತನಾಡಿಸಲು ಅವರ ಮನೆಗೆ ಹೋಗಿದ್ದೆ. ಗಂಡ ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುತ್ತಾ ದೂರದ ದೆಹಲಿಯಲ್ಲಿ ಸಂಸಾರ ಹೇಗೆ ನಡೆಯುತ್ತಿದೆ ಇತ್ಯಾದಿ ವಿಚಾರಿಸುತ್ತಿದ್ದೆ. ಅವಳ ಪತಿಗೆ ಕನ್ನಡ ಸ್ವಲ್ಪ ಸ್ವಲ್ಪ ಅರ್ಥವಾಗುತ್ತಿತ್ತು. ನನ್ನ ಹತ್ತಿರ ಅವರ ದಿನಚರಿಯನ್ನು ಅವರದೇ ರೀತಿಯಲ್ಲಿ ಸಂತೋಷದಿಂದ ಹಿಂದಿಯಲ್ಲಿ ನನಗೆ ತಿಳಿಸುತ್ತಿದ್ದನು. ನನಗೆ ಸುಮಾರಾಗಿ ಹಿಂದಿ ಅರ್ಥ ಆಗುತ್ತಿತ್ತು.

ಅವನು ತಿಳಿಸಿದ್ದರಲ್ಲಿ ಒಂದು ಮಾತ್ರ ಅರ್ಥ ಆಗಲಿಲ್ಲ ಏನೆಂದರೆ 'ಆಂಟೀ...I like BMW and also expert in it. ಅದಕ್ಕಾಗಿ ನನ್ನ ಹೆಂಡತಿ ಖುಷಿ ಆಗಿರೋದು' ಎಂದಾಗ ನಾನೆಲ್ಲೋ ಅವರ ಹತ್ತಿರ ದೊಡ್ಡ BMW ಕಾರ್ ಇದೆ. ಅದಕ್ಕೆ ಖುಷಿ ಇರಬಹುದು ಎಂದುಕೊಂಡು ಅವಳಿಗೆ ಈ ಬಗ್ಗೆ ಕೇಳಿದಾಗ ಅವಳು ನಗುತ್ತಾ ತಿಳಿಸಿದ್ದು ಏನೆಂದರೆ 'ಮದುವೆಗೆ ಮೊದಲಿನಿಂದಲೂ ಅಡುಗೆ ಕೆಲಸ ಅವರೇ ಮಾಡಿಕೊಳ್ಳುತ್ತಿದ್ದರು ಅದರಲ್ಲೂ ಪಾತ್ರೆ ತೊಳೆಯುವ ಕೆಲಸ (ಬರ್ತನ್ ಮಾಂಜನೇ ವಾಲೇ ಕಾಮ್) ಸಂಕ್ಷಿಪ್ತವಾಗಿ BMW. ಇದನ್ನು ಇಷ್ಟಪಟ್ಟು ಮಾಡುತ್ತಾರೆ' ಎಂದಾಗ ಭಾಷಾ ಗೊಂದಲಗಳ ಮಧ್ಯೆಯೂ ಭಾವನೆಗಳ ವಿನಿಮಯಕ್ಕೆ ತೊಂದರೆ ಆಗಲಿಲ್ಲಾ ಎಂದು ಸಂತೋಷವಾಯಿತು.

**ಜಯಮಾಲಾ ಪೈ**

## ಲೆನಿನ್ ಕಾಲದ ಬಟ್ಟೆ ಬೇಡ!

ಪುಟ್ನಂಜ ಪಂಚಾಯ್ತಿ ಚುನಾವಣೆಯಲ್ಲಿ ಗೆದ್ದ ನಂತರ ಆತನ ಆಪ್ತಮಿತ್ರ ನಂಜ ಇನ್ಮುಂದೆ ನೀನು ಒಳ್ಳೊಳ್ಳೆ ಬಟ್ಟೆ ಹಾಕಬೇಕು ಸ್ಥಾನಕ್ಕೆ ತಕ್ಕಂತೆ ವೇಷ, ವೇಷಕ್ಕೆ ತಕ್ಕಂತೆ ಭಾಷೆ ಅಂತ ಹುರಿದುಂಬಿಸಿದ. ಅದಕ್ಕೆ ತಲೆಯಾಡಿಸಿದ ಪುಟ್ನಂಜ. ಇಬ್ಬರು ನಗರದ ಪ್ರತಿಷ್ಠಿತ ಮಾಲ್‌ಗೆ ಬಂದರು. ಅಲ್ಲಿನ ನೌಕರ ಲಿನನ್ ಶರ್ಟ್ ಬಟ್ಟೆಗಳನ್ನು ಇವರ ಮುಂದೆ ಹರಡುತ್ತಾ 'ಸಾರ್, ಇದು ವಿಐಪಿಗಳು, ರಾಜಕಾರಣಿಗಳು ಹಾಕ್ತಾರೆ, ಇದು ಅಪ್ಪಟ ಲಿನನ್, ನಿಮಗೆ ಸೂಪರ್ ಆಗಿ ಕಾಣುತ್ತೆ ಸಾರ್' ಎಂದ, ಅದಕ್ಕೆ ಪುಟ್ನಂಜ 'ಲೆನಿನ್ ಕಾಲದ ಬಟ್ಟೆಗಳು ಬ್ಯಾಡ, ನಮ್ ಕಾಲದ ಬಟ್ಟೆಗಳ ತೋರ್ಸು' ಅಂತ ಹೇಳಿದಾಗ ಅಂಗಡಿಯವನು ಸುಸ್ತು!

**ಮಲ್ಲಿಕಾರ್ಜುನ ಸುರಧೇನುಪುರ**



ಕಲೆ: ಗಣೇಶ ಆಚಾರ್ಯ